ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ, ಸದನ ಸಮಿತಿ ರಚಿಸಲು ನಿಮಗಿರುವ ಅಧಿಕಾರವನ್ನು ಚಲಾಯಿಸಿ ತಾವು ಆದೇಶ ಕೊಡಿ ಈ ರಾಜ್ಯದ ಜನರ ಹಿತದೃಷ್ಟಿಯಿಂದ ಸದನ ಸಮಿತಿ ರಚಿಸಬೇಕು, ಇದಕ್ಕೆ ಒಪ್ಪಿಗೆ ಕೊಡಿ

(ಗೊಂದಲ)

ಅಧ್ಯಕ್ಷರು ದಯವಿಟ್ಟು ತಾವು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿ ಅಲಂಕರಿಸಬೇಕೆಂದು ಮಾನ್ಯ ಸದಸ್ಯರುಗಳಲ್ಲಿ ಕಳಕಳಿಯ ಮನವಿಮಾಡಿಕೊಳ್ಳುತ್ತೇನೆ

ಶ್ರೀ ಜಿ ವಿ ರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ದಯವಿಟ್ಟು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು

(ಈ ಹಂತದಲ್ಲಿ ಬಾವಿಯಲ್ಲಿ ಧರಣಿನಿರತರಾಗಿದ್ದ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು "ಸದನ ಸಮಿತಿ ಬೇಕೇ ಬೇಕು, ಎಂಬ ಘೋಷಣೆಗಳನ್ನು ಕೂಗುತ್ತಿದ್ದರು)

2 ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವಕ್ಕೆ ಮುಖ್ಯಮಂತ್ರಿಗಳಿಂದ ಉತ್ತರ,

ಅಧ್ಯಕ್ಷರು ಈಗ ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳುತ್ತೇನೆ

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿ) ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ಸದಸ್ಯರಾದ ಡಾ, ಜಿ ಪರಮೇಶ್ವರ್ ಅವರು ಮಾತನಾಡಿ ಸಾಕಷ್ಟು ಬೆಳಕು ಚೆಲ್ಲಿದ್ದಾರೆ ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲನೆಯದಾಗಿ ಸಮ್ಮಿಶ್ರ ಸರ್ಕಾರ ಹೊರಹೊಮ್ಮಿದೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನೇನು ಪ್ರಕಟವಾಗಿದೆ ಅವೆಲ್ಲವನ್ನೂ ಕೂಡ ಅನುಷ್ಠಾನಕ್ಕೆ ತರುವ ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತದೆಂಬ ಮಾತನ್ನು ನಾನು ಹೇಳಬಯಸುತ್ತೇನೆ

(ಗೊಂದಲ)

ಇವತ್ತು ವಿರೋಧ ಪಕ್ಷದವರು ಈ ರೀತಿ ವರ್ತಿಸಿದರೆ ಹೇಗೆ ? ನಾವು ಇಟ್ಟುಕೊಂಡಿರುವ ಉದ್ದೇಶಗಳ ಗುರಿ ಮುಟ್ಟಬೇಕಾದರೆ ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮವಾಗಿ ಏನು ನಮ್ಮ ಸರ್ಕಾರ ಬಂದಿದೆ ರಾಜ್ಯದ ಸಮಸ್ಯೆ ಬಗ್ಗೆ ಪ್ರಾಮಾಣಿಕವಾಗಿ ನಿರ್ವಹಣೆ ಮಾಡುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ ಈ ಬಗ್ಗೆ ಇವತ್ತಿನ ದಿವಸ ನಮ್ಮ ಸದನದಲ್ಲಿ ಕೂಡ ರಾಜ್ಯಪಾಲರು ಮಾಡಿರುವ ಸರ್ಕಾರದ ವತಿಯಿಂದ ವಂದನಾ ನಿರ್ಣಯವನ್ನು ತರುತ್ತಿದ್ದೇವೆ

ಅಧ್ಯಕ್ಷರು ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ ಪ್ರಸ್ತಾವ ಏನೆಂದರೆ, "2004ನೇ ಜೂನ್ 11ರಂದು ವಿಧಾನಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾಗಿ ವಂದನೆಗಳನ್ನು ಸಮರ್ಪಿಸುತ್ತೇವೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು ಅಂಗೀಕರಿಸಿದ ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು

3 ಚುನಾವಣಾ ಪ್ರಸ್ತಾವ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ "ದಿನಾಂಕ 14ನೇ ಜೂನ್ 2004ರಂದು ಕರ್ನಾಟಕ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ಅನಾಧಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ ಈ ಕುರಿತು ವಿವಿಧ ಪಕ್ಷಗಳ ಸಚೇತಕರುಗಳು ನೀಡಿರುವ ಒಡಂಬಡಿಕೆ ಪಟ್ಟಿಯ ರೀತ್ಯಾ ಮಾನ್ಯ ವಿಧಾನಸಭೆ ಸದಸ್ಯರುಗಳನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ಅನಾಧಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಮಾನ್ಯ ಸದಸ್ಯರನ್ನು ನೇಮಿಸಲು ಮಾನು ವಿಧಾನ ಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡುತ್ತದೆ"

ಅಧ್ಯಕ್ಷರು ಪ್ರಸ್ತಾವ ಏನೆಂದರೆ, " ದಿನಾಂಕ 14ನೇ ಜೂನ್ 2004ರಂದು ಕರ್ನಾಟಕ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ಅನಾಧಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ ಈ ಕುರಿತು ವಿವಿಧ ಪಕ್ಷಗಳ ಸಚೇತಕರುಗಳು ನೀಡಿರುವ ಒಡಂಬಡಿಕೆ ಪಟ್ಟಿಯ ರೀತ್ಯಾ ಮಾನ್ಯ ವಿಧಾನಸಭೆ ಸದಸ್ಯರುಗಳನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ಅನಾಧಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಮಾನ್ಯ ಸದಸ್ಯರನ್ನು ನೇಮಿಸಲು ಮಾನ್ಯ ವಿಧಾನ ಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡುತ್ತದೆ",

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು)

4 ಸಚಿವರ ಹೇಳಿಕೆ

ಜೂನ್ 2004 ರಿಂದ ಆಗಸ್ಟ್–2004 ರ ಮುಂಗಾರಿನ ಅವಧಿಯಲ್ಲಿ ವಿದ್ಯುತ್ ಬಳಕೆಯನ್ನು ಹೆಚ್ಚುಸುವುದರ ಬಗ್ಗ ಲೋಕೋಪಯೋಗಿ ಹಾಗೂ ವಿದ್ಯುತ್ ಸಚಿವರ ಹೇಳಿಕೆ

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) ಮಾನ್ಯ ಅಧ್ಯಕ್ಷರೆ, 2004ರ ಮಾರ್ಚ್ ತಿಂಗಳಿನಲ್ಲಿ ರಾಜ್ಯದ ವಿದ್ಯುತ್ ಬೇಡಿಕೆಯ ಶೃಂಗಕ್ಕೇರಿ 100 ದಶಲಕ್ಷಯೂನಿಟ್ಟುಗಳಿಗೆ (ದ ಲ ಯೂ) ಏರಿತು. ತರುವಾಯ ಈ ಬೇಡಿಕೆಯ 92 ದ ಲ ಯೂ ಗಳಿಗೆ ಇಳಿಯಿತು ಮೇ ತಿಂಗಳಿನಲ್ಲಿ ಒಳ್ಳೆಯ ಮಳೆಯಾಯಿತು ಮತ್ತು ಇದು ಈ ತಿಂಗಳಿನಲ್ಲಿಯೂ ಮುಂದುವರೆದಿದೆ ವಿದ್ಯುತ್